ಭಾರತೀಯ ಅರಣ್ಯ ಸೇವೆಗೆ 2019ರಲ್ಲಿ ಆಯ್ಕೆಯಾದ ಏಕೈಕ ಕನ್ನಡತಿ ಲಕ್ಷ್ಮಿ. ಮೂಲತಃ ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ಅವರು, ಕೋಚಿಂಗ್ ಪಡೆಯದೆ ಐಎಎಸ್–ಐಎಫ್‌ಎಸ್ ಎರಡರಲ್ಲೂ ಆಯ್ಕೆಯಾಗಿದ್ದಾರೆ. 'ಡಬಲ್ ಧಮಾಕ' ಹೊಡೆದಿರುವ ಅವರು ತಮ್ಮ ಯಶಸ್ಸಿನ ಹಿಂದಿನ ಪರಿಶ್ರಮವನ್ನು 'ಸುಧಾ' ಜೊತೆ ಹಂಚಿಕೊಂಡಿದ್ದಾರೆ.

# ಲಕ್ಷ್ಮಿ ಡಬಲ್ ಧಮಾಕ



■ ರಾಘವೇಂದ್ರ ಕೆ.

◆ **ಅಧಿಕಾರಿ ಆಗುತ್ತಿರುವ ಈ ಹೊತ್ತಿಗೆ ನಿಮ್ಮ ಜೀವನಶೈಲಿ ಹೇಗಿದೆ?**

ದುಡಿಮೆಯ ಉದ್ಯೋಗ ಬಿಟ್ಟು ವರ್ಷವೇ ಉರುಳಿತ್ತು. ದಿನವಿಡೀ ಓದುವುದನ್ನೇ ಕೆಲಸ ಮಾಡಿಕೊಂಡಿದ್ದೆ. ಭಾರತೀಯ ನಾಗರಿಕ ಸೇವೆಗೆ ಪ್ರವೇಶ ಪಡೆದಿರುವ ಈ ಸಂದರ್ಭದಲ್ಲಿ ಆರಾಮಾಗಿ ಕಾಲ ಕಳೆಯೋಣ ಎಂದುಕೊಂಡಿದ್ದೆ. ಆದರೆ, ಹಾಗಿರಲು ಸಾಧ್ಯವಿಲ್ಲ. ನನ್ನ ಜವಾಬ್ದಾರಿ ಹೆಚ್ಚಿದೆ. ನನ್ನ ಶ್ರಮ ಮತ್ತೊಬ್ಬರಿಗೆ ಸ್ಫೂರ್ತಿಯಾಗಬೇಕು ಎನ್ನುವ ದೃಷ್ಟಿಯಿಂದ ಮಾತನಾಡಲು ಶುರು ಮಾಡಿದ್ದೇನೆ. ಶಾಲಾ–ಕಾಲೇಜುಗಳಿಗೆ ಭೇಟಿ ನೀಡುತ್ತಿದ್ದೇನೆ. ಐಎಎಸ್ ಆಕಾಂಕ್ಷಿಗಳು ಮತ್ತು ಕೋಚಿಂಗ್ ಕೇಂದ್ರಗಳಿಗೆ ಹೋಗಿ ನಾಗರಿಕ ಸೇವಾ ಪರೀಕ್ಷೆಯ ಸಿದ್ಧತೆ ಮತ್ತು ಅದನ್ನು ಬರೆಯುವ ಕ್ರಮದ ಬಗ್ಗೆ ಹೇಳುತ್ತಿದ್ದೇನೆ. ಅನೇಕರು ಫೋನ್ ಮಾಡಿ ತಮ್ಮ ಸಂಶಯಗಳನ್ನು ಪರಿಹರಿಸಿಕೊಳ್ಳಲು ಬಯಸುತ್ತಾರೆ. ಹೀಗಾಗಿ ಪ್ರಸ್ತುತ ಇನ್ನೂ ಜಾಸ್ತಿ ಬಿಜಿಯಾಗಿದ್ದೇನೆ.

◆ **ಐಎಎಸ್ ಕನಸು ಚಿಗುರಿದ ಕತೆ ಹೇಳಿ?**

ನಮ್ಮ ಕುಟುಂಬದಲ್ಲಿ ನಾಗರಿಕ ಸೇವೆಯಲ್ಲಿ ಯಾರೊಬ್ಬರೂ ಇಲ್ಲ. ಎಂಜಿನಿಯರ್ ಆಗುವುದು ನನ್ನ ಗುರಿಯಾಗಿತ್ತು. ನಾನು ಓದಿದ್ದು ಬೆಂಗಳೂರಿನ ಬಿಎಂಎಸ್ ಕಾಲೇಜಿನಲ್ಲಿ. ನಮ್ಮ ಕಾಲೇಜಿಗೆ ಇಬ್ಬರು ಐಎಎಸ್ ಅಧಿಕಾರಿಗಳು ಬಂದಿದ್ದರು. ಅವರು ಅಧಿಕಾರಿಯಾಗಿ ಅಭಿವೃದ್ಧಿ, ಸರ್ಕಾರದ ನೀತಿ–ನಿಯಮಗಳ ರಚನೆಯಲ್ಲಿ ತಾವು ವಹಿಸುವ ಪಾತ್ರದ ಬಗ್ಗೆ ಹೇಳಿದ್ದರು. ಅವರ ಭಾಷಣ ಕೇಳಿ, ಸಮಾಜದ ಒಳಿತಿಗೆ ನೇರವಾಗಿ ಭಾಗಿಯಾಗುವ ದೊಡ್ಡ ಅವಕಾಶ ಅಲ್ಲಿದೆ ಎನ್ನುವ ಅಂಶ ನನ್ನ ಮೇಲೆ ಪ್ರಭಾವ ಬೀರಿತು. ಆದರೂ ಕಾಲೇಜು ಮುಗಿಯುವ ತನಕ ನಾನು ಮಾನಸಿಕವಾಗಿ ಎಂಜಿನಿಯರ್ ಆಗಿಯೇ ಇದ್ದೆ. ಅದನ್ನಷ್ಟೇ ಓದುತ್ತಿದ್ದೆ. ಆದರೆ, ಮನಸ್ಸಿನ ಮೂಲೆಯಲ್ಲಿ ಎಲ್ಲೋ ಐಎಎಸ್ ಕನಸು ಚಿಗುರೊಡೆದಿತ್ತು.

ಎಂಜಿನಿಯರಿಂಗ್ ಮುಗಿದ ಬಳಿಕ ಒಂದು ವರ್ಷ ಖಾಸಗಿ ಕಂಪನಿಯಲ್ಲಿ ಕೆಲಸಕ್ಕೂ ಸೇರಿದ್ದೆ. ನಾಗರಿಕ ಸೇವಾ ಪರೀಕ್ಷೆಯ ಅಧ್ಯಯನಕ್ಕೆ ಹಣದ ಅಗತ್ಯವಿದ್ದು, ಆ ಹಣವನ್ನು ನಾನೇ ದುಡಿಯಬೇಕೆಂದು ಆ ಕೆಲಸಕ್ಕೆ ಸೇರಿಕೊಂಡಿದ್ದೆ. ಅಲ್ಲದೆ, ಪರೀಕ್ಷೆ ಬರೆದ ಮಾತ್ರಕ್ಕೆ ಉದ್ಯೋಗ ಸಿಗುವ ಭರವಸೆಯೂ ಇರಲಿಲ್ಲ. ಸಾಫ್ಟ್‌ವೇರ್ ಕ್ಷೇತ್ರದ ಉದ್ಯೋಗ ಹೇಗಿರುತ್ತದೆ ಎಂಬ ಕುತೂಹಲಕ್ಕೂ ಆ ಕೆಲಸ ಮಾಡಿದೆ. ಓದಿನ ಅಗತ್ಯಕ್ಕೆ ಹಣ ಉಳಿತಾಯ ಮಾಡಿ, ಓದಲು ಕುಳಿತೆ.

◆ **ಓದಿಗೆ ಅಂದಾಜು ಖರ್ಚು ವೆಚ್ಚ ಎಷ್ಟಾಗಬಹುದು?**

ನಾನು ಹುಟ್ಟಿ ಬೆಳೆದದ್ದೆಲ್ಲ ಬೆಂಗಳೂರಿನಲ್ಲಿಯೇ. ದೆಹಲಿಗೆ ಹೋಗಿ ತರಬೇತಿ ಪಡೆಯಲೂ ಆಗಲಿಲ್ಲ. ಹಾಗೆಂದು ಇಲ್ಲೂ ಯಾವ ತರಬೇತಿ–ಕೋಚಿಂಗ್ ಕೇಂದ್ರಕ್ಕೂ ಸೇರಲಿಲ್ಲ. ಹಣ ಹೂಡಿದ್ದೆಲ್ಲ ಪುಸ್ತಕಗಳಿಗೆ ಮಾತ್ರ. ಅಮೆಜಾನ್, ಫ್ಲಿಪ್‌ಕಾರ್ಟ್ ಮೂಲಕ ಪುಸ್ತಕಗಳನ್ನು ತರಿಸಿಕೊಳ್ಳುತ್ತಿದ್ದೆ. ಎಷ್ಟು ಖರ್ಚಾಯಿತು ಎನ್ನುವುದನ್ನು ಲೆಕ್ಕ ಇಟ್ಟಿಲ್ಲ. ಐಚ್ಛಿಕ ವಿಷಯಗಳನ್ನು ಎರಡು ಬಾರಿ ಬದಲಾಯಿಸಿದ್ದರಿಂದ ಅವುಗಳಿಗೆ ಸಂಬಂಧಿಸಿದ ಪುಸ್ತಕ ಹೊಂದಿಸಿಕೊಳ್ಳಲು ಸ್ವಲ್ಪ ಹಣ ಖರ್ಚಾಯಿತು.

◆ **ಅಧ್ಯಯನ ಸಂದರ್ಭದಲ್ಲಿ ಮಾನಸಿಕ ಸಿದ್ಧತೆ ಹೇಗಿತ್ತು?**

ಪರೀಕ್ಷೆಗೆ ಓದಲೇಬೇಕು ಎಂದು ನನ್ನಷ್ಟಕ್ಕೆ ಸಂಕಲ್ಪ ಮಾಡಿದ್ದೆ. ಇದು ಸುಲಭಕ್ಕೆ ಸಾಧ್ಯ ಆಗುವಂತಹದ್ದಲ್ಲ. ಒಂದು ವರ್ಷ ಹಿಡಿಯುತ್ತದೆ ಎನ್ನುವುದು ಗೊತ್ತಿತ್ತು. ಆದರೆ ಆಯಿತು, ಇಲ್ಲದಿದ್ದರೆ ಇಲ್ಲ ಎನ್ನುವುದೂ ಗೊತ್ತಿತ್ತು. ಒಂದು ವರ್ಷದ ಓದಿನ ಗುರಿ ಎರಡನೇ ವರ್ಷಕ್ಕೆ ವಿಸ್ತರಿಸಿತು. ಯಾವತ್ತೂ ನನಗೆ ಇದನ್ನು ಯಾಕೆ ಆಯ್ಕೆ ಮಾಡಿಕೊಂಡಿದ್ದೇನೆ ಎಂಬ ಬೇಸರ ಹುಟ್ಟಲಿಲ್ಲ. ಓದು ಒತ್ತಡ ಉಂಟುಮಾಡುತ್ತಿದೆ ಎಂದೂ ಅನ್ನಿಸಲಿಲ್ಲ. ಒಳ್ಳೆಯ ಸ್ನೇಹಿತರ ಬಳಗ ಸಿಕ್ಕಿತ್ತು. ಯಾವ ಪದವಿ ಅಧ್ಯಯನದಲ್ಲೂ ಇಷ್ಟೊಂದು ಓದುವ ಅವಕಾಶ ಸಿಗುವುದಿಲ್ಲ. ಪ್ರತಿ ದಿನ ಬೇರೆ ಬೇರೆ ವಿಷಯಗಳನ್ನು ತಿಳಿದುಕೊಳ್ಳುವ ಅವಕಾಶ ಇತ್ತು. ಪ್ರತಿವಾರ ಟೆಸ್ಟ್ ಬರೀತಾ ಇದ್ದೆ. ಒಂದು ವಾರ ಓದಿದ ಮೇಲೆ ಕಿರುಪರೀಕ್ಷೆ ತೆಗೆದುಕೊಳ್ಳುತ್ತಿದ್ದೆ. ಪರೀಕ್ಷೆ ಆದ ನಂತರ